**ವ್ಯಾಖ್ಯಾನ**

# <u>ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು</u>

**ದಾಸರ ದಾಸನೆಂದೆನಿಸಯ್ಯ**

ಹರಿದಾಸಸಾಹಿತ್ಯದಲ್ಲಿ ಉಗಾಭೋಗಗಳಿಗೆ ವಿಶೇಷ ಸ್ಥಾನವಿದೆ. ಮಿತವಾದ ಮಾತುಗಳಲ್ಲಿ ಅಮಿತಾರ್ಥ ತುಂಬಿದೆ. ಹರಿದಾಸರ ಅನುಭವದ ಮಾತುಗಳು, ಅನುಭವಿಸೆ ಅಮಿತ ಸುಖ. ಶ್ರೀಪುರಂದರದಾಸರ ಈ ಉಗಾಭೋಗದಲ್ಲಿ ಒಬ್ಬ ಹರಿದಾಸನಾಗಲು ಇರಬೇಕಾದುದರ ಪಟ್ಟಿ ಇದೆ. ನಿಜಾರ್ಥದಲ್ಲಿ ಸಾಧನೆಗೆ ಅನುವಾಗುವ ಅನುವಾಕ್ಕುಗಳು. ಸಾಧಿಸುವವಗೆ ಕಿವಿಮಾತುಗಳು. ಇವರು ಒಂದುಕಡೆ 'ನಿಂದಕರಿರಬೇಕು' ಎಂದರು. ಇಲ್ಲಿ ಅವರಿದ್ದರೂ ಸಾಧಕ ಹೀಗಿರಬೇಕೆಂದರು. ಹೊಗಳಿಕೆ-ತೆಗಳಿಕೆಗಳಿಗೆ ಕಿವಿಕೊಡದಿರಿ ಎನ್ನುವರು. ಅಂತಹವರಿಂದಾಗುವ ಲಾಭ ಇಂತೆನ್ನುವರು.

**ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು**
**ಭಂಗಿಸಿ ಭಂಗಿಸಿ ಎನಗೆ ಬಯಲಾಸೆ ಕೆಡಿಸಿದರು**
**ಕೆಂಗೆಡಿಸಿ ಕಾಮಕ್ರೋಧವ ಬಿಡಿಸಿದರು**
**ಹಿಂದೆ ನಿಂದಿಸಿದವರೇ ಎನ್ನ ಬಂಧು ಬಳಗ**
**ಬಾಯಿ ಬಡಕರಿಂದ ನಾನು ಬದುಕಿದೆನೋ ಹರಿಯೇ**
**ಕಾಡಿ ಕಾಡಿ ಕೈವಲ್ಯಕ್ಕೆ ಪಥವಿತ್ತರು**
**ಕಾಸು ಹುಟ್ಟದಂತೆ ಪ್ರಾಯಶ್ಚಿತ್ತ ಮಾಡಿದರು**
**ಮೀಸಲು ಮಾಡಿದರು ಹರಿಯ ಒಡವೆಯೆಂದು**
**ಲೇಸು ಕೊಡೊ ನಮ್ಮಪ್ಪ ಪುರಂದರವಿಠ್ಠಲ ನಿನ್ನ**
**ದಾಸರ ದಾಸನೆಂದೆನಿಸಯ್ಯ ಹರಿಯೇ ।**

ಸಮಾಜದಲ್ಲಿ ಹೀಯಾಳಿಸುವವರು ಆಡಿಕೊಂಬುವವರೇ ಬಹಳ. ಒಂದುಕಡೆ ದಾಸರು 'ಹೀನ ಬಲ್ಲನೆ ಸುಗುಣ ದುರ್ಗುಣಗಳನು' ಎಂದರು. ನಿಜ. ಆದರೂ ಸಾಧಕನಾದವಗೆ ಇರಬೇಕು ತಾಳ್ಮೆ - ಸಹನೆ. ಇದರಿಂದಾಗುವುದು ಸಾಧನೆ. ಸಂವಾದಿಯಾಗಿ ಶ್ರೀವಾದಿರಾಜರು ಹೇಳಿದ ಮಾತು –

**ಹಳಿದು ಹಂಗಿಸುವ ಹಗೆಯ ಮಾತನು ತಾಳು ।**

**ಸುಳಿನುಡಿ ಕುಹಕ ಕುತಂತ್ರವನು ತಾಳು ।**

**ಅಳುಕದಲೆ ಬಿರುಸು ಬಿಂಕದ ನುಡಿಯ ನೀ ತಾಳು ।। ಎಂದು.**

ಕುಂತಿ ಶ್ರೀಕೃಷ್ಣನಲ್ಲಿ ಸಂಸಾರದಿ ಕಷ್ಟಗಳು, ನಿಂದನೆಗಳಿಗೆ ಒಳಗಾಗುವುದನ್ನು ಒಳಿತೆನ್ನುವಳು. ಹೀಗಾಗಿ ನಿನ್ನ ನೆನಪು ಉಳಿದೀತು ಎನ್ನುವಳು. ದಾಸರು ಸಾಧನೆಗೆ ಅಡ್ಡಿಯಾಗುವ ಆತಂಕಗಳನ್ನು ಹೇಗೆ ಸ್ವೀಕರಿಸಬೇಕೆಂದು ತಿಳಿಸಿದರು. ದಾಸರು 'ಕಲ್ಲಾಗಿ ಇರಬೇಕು ಕಠಿನಭವ ತೊರೆಯೊಳಗೆ' ಎಂದಂತೆ ಸಮಾಜದಲ್ಲಿ ಹಂಗಿಸುವ (ಹೀಯಾಳಿಸಿ ಮೂದಲಿಸುವ) ಭಂಗಿಸುವ (ಅವಮಾನಿಸುವ - ಹಿಂಸಿಸುವ) ಕೆಂಗೆಡಿಸುವ (ಉದ್ರೇಕಕ್ಕೊಳಗಾಗಿಸುವ) ಹಿಂದಾಡಿಕೊಳ್ಳುವ ಇಂತಹ ಪ್ರಸಂಗಗಳಲ್ಲಿ ಸಾಧಕನು ತಿಳಿಯಬೇಕಾದ, ಅನುಸರಿಸಬೇಕಾದುದನ್ನು ತಿಳಿ ಹೇಳಿದರು. ಇಂತಹ ಸಂದರ್ಭದಲ್ಲಿ ಶ್ರೀಜಗನ್ನಾಥದಾಸರ ಮಾತು ನೆನಪಿರಲಿ **ನಿಂದಿಸುವರೆಲ್ಲ ನಿಂದ್ಯರಾಗುವರು ಅಭಿವಂದಿಸುವ ಜನರು ಜಗದೊಳು ಜನರಿಂದ ವಂದ್ಯರಾಗುವರು.** ಆದರೂ ಸಾಧಕರಾದವರು ಜಿತೇಂದ್ರಿಯರಾಗಿ ಭಗವಂತನ ಅನುಗ್ರಹಾಕಾಂಕ್ಷಿಗಳಾಗಿ ಮಾರ್ಮಿಕವಾಗಿ ತಮ್ಮ ಸಾಧನೆಗಳನ್ನು ಪೂರೈಸಿಕೊಳ್ಳಬೇಕೆಂದರು. ದಾಸರು ಜನರ ಪ್ರವೃತ್ತಿಯನ್ನು ನೋಡಿ ಅನುಭವಿಸಿ ಹೇಳುವ ಮಾತು - ಅನೇಕ ಪ್ರಸಂಗಗಳಲ್ಲಿ ಬಂದು - ಬಾಂಧವರೂ ನಾನಾತರಹದ ಅಡ್ಡಿ - ಆತಂಕಗಳನ್ನು ಒಡ್ಡುವುದುಂಟು ಎಂದು. ಅಲ್ಲದೇ ಮೀಸಲು (ಪ್ರತ್ಯೇಕತೆ) ಮಾಡುವರೆಂದರು. ದಾಸರು ತಿಳಿಸಿದಂತೆ 'ಮರ್ಮವನರಿತು ಮಾಡಲುಬೇಕು' ಎಂಬುದು ಮಂತ್ರ-ತಂತ್ರವಾಗಬೇಕು. ಇದಕ್ಕೆ ದಾಸರ ಮತ್ತೊಂದು ಮಾತು-**ಇದ್ದರಿರಬೇಕು ಸಂಸಾರ ಸುಖದಲ್ಲೀಗೆ । ಪದ್ಮಪತ್ರವು ಜಲದೊಳಗಿದ್ದಾಂಗೆ ।।** ಎಂದಾಗಿ.ಶ್ರೀಜಗನ್ನಾಥ ದಾಸರು ಒಂದು ಕಡೆ ಇಂತಹ ನಿಂದಕರು ಇದ್ದರೆ ಒಳಿತು ಎಂದದ್ದರ ಕಾರಣ ಹೀಗಿದೆ. **ಇರಬೇಕು ನಿಂದಕರು ಸಜ್ಜನರಿಗೆ । ದುರಿತರಾಶಿಗಳಿಗೆ ಪರಿಹರಿಸುವ ಲೋಸುಗ ನಿತ್ಯ ।।**

ಎಂದು. ಈ ಉಗಾಭೋಗದಲ್ಲಿ ದಾಸರು ಸಾಧಕನು ತನ್ನ ಪರಿಸರದೊಂದಿದ್ದು ಚಿಂತಿಸುವ ನಿಯಮಾವಳಿಯನ್ನು ನಿರೂಪಿಸಿರುವರು. ಸಮಾಜದಲ್ಲಿ ಬಾಳುವ ಉಪಾಯವನ್ನು ನಿರ್ದೇಶಿಸಿದರು. ಜೀವನದಲ್ಲಾಗುವ ಮಾನಾಪಮಾನ, ಜಯಾಪಜಯ, ಲಾಭಾಲಾಭಗಳನ್ನು ಸ್ವೀಕರಿಸಿ ಸಾರ್ಥಕ ಜೀವನ - ಬಾಳುವೆ ಸಾಗಿಸುವ ಮರ್ಮವನ್ನು ತಿಳಿ ಹೇಳಿರುವರು. ಏನೇಯಾಗಲಿ ಭಗವಂತನಲ್ಲಿ ಬೇಡಬೇಕಾದದ್ದು ಹೀಗೆಂದರು. 'ನಿನ್ನ ದಾಸರ ದಾಸನೆಂದೆನಿಸಯ್ಯ' ಎಂಬುದಾಗಿ. ಕಾರಣ ನಿಜಹರಿದಾಸರ ಸಂಗವಿರಲು ಜೀವನದಲ್ಲಿ ನಿಶ್ಚಿಂತೆ ಎಂಬುದಾಗಿದೆ. ಇದು ಲೋಕನೀತಿಯಾಗಿ ಆಧ್ಯಾತ್ಮಿಕಚಿಂತನೆಯೂ ಆಗಿದೆ. ಶ್ರೀದಾಸರು ತಿಳಿಸಿದಂತೆ 'ಕೈವಲ್ಯಕ್ಕೆ ಪಥವಿತ್ತರು' ಎಂಬ ಮಾತು ನೆನಪಿರಲಿ, ಇದು ಸಾಧನೆಗಳಿಗೆ ಸೋಪಾನವಾಗಿ ಇಹಪರಂಗಳಲ್ಲಿ ಸುಖೋನ್ನತಿಗೆ ಹೇತುವಾಗುವಲ್ಲಿ ಸಂಶಯವಿಲ್ಲ. ಪುರಂದರದಾಸರ ಎರಡು ಮಾತುಗಳನ್ನು ನೆನಪಿನಲ್ಲಿಟ್ಟಿಕೊಂಡು ನಡೆಯೋಣ.

**' ತನ್ನ ಕಾರ್ಯಕ್ಕಾಗಿ ಪರರ ಕೆಡೆಸುವವರ ಸಂಗ ಬೇಡ'**

**'ಕಲ್ಲಾಗಿ ಇರಬೇಕು ಕಠಿಣಭವ ತೊರೆಯೊಳಗೆ'**

'ಚಿತ್ತಜನಯ್ಯನ ಚಿತ್ತದೊಳಿಟ್ಟವಗೆ ಚಿಂತೆಯುಂಟೆ'.

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು